ಶ್ರೀ ಕೆ. ಎಚ್. ಪಾಟೀಲ್.—ಬೀದರ್ ಜಿಲ್ಲೆಯಲ್ಲಿ ೨ ಭೂ ಮಾಪನ ವಿಭಾಗಗಳು ಇವೆಯೇ ಎಂಬುದಾಗಿ ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಇಲ್ಲ ಅಂತ ಉತ್ತರ ಹೇಳಿದ್ದೇವೆ. ಪೀರಿಯಾಡಿಕಲ್ ಆಗಿ ಯಾವಾಗಲೂ ಉತ್ತರವನ್ನು ಕೊಡುವಾಗ ಮಾನ್ಯ ಸದಸ್ಯರ ಮನಸ್ಸಿನ ಇಂಗಿತವನ್ನು ತಿಳಿದುಕೊಂಡು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ನಿಜವಾಗಿ ವಸ್ತು ಸ್ಥಿತಿ ಏನಿದೆ ಅದನ್ನು ಅಧಿಕಾರಿಗಳು ನೋಡಿ ಅದನ್ನು ಕೊಟ್ಟಿರುತ್ತಾರೆ. ಅದರ ಮೇಲೆ ನಾವು ಹೇಳುತ್ತೇವೆ. ಮತ್ತೆ ಮಾನ್ಯ ಸದಸ್ಯರು ಜನರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ. ಹೌದು ಹಳ್ಳಿಹಳ್ಳಿಯಲ್ಲಿ ಪ್ರತಿಯೊಂದು ಊರಿಗೂ ಬೇಕು ಬೇಕು ಎಂದು ಹೇಳುತ್ತಾರೆ. ಆದರೂ ಪರಿಸ್ಥಿತಿಗನುಗುಣವಾಗಿ ಅವುಗಳನ್ನು ಹೆಚ್ಚು ಮಾಡುತ್ತೇವೆಯೇ ವಿನಹ ಒಮ್ಮೆಗೇ ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.—ಬಸವ ಕಲ್ಯಾಣದಲ್ಲಿ ಕಂದಾಯ ಉಪ ವಿಭಾಗವನ್ನು ಮಾಡಲಾಗಿದೆ ಮತ್ತು ಸಣ್ಣ ನೀರಾವರಿ ಉಪ ಕೇಂದ್ರವನ್ನಾಗಿ ಮಾಡಲಾಗಿದೆ. ಆದ್ದರಿಂದ ಈಗಾಗಲೇ ನಮ್ಮ ಜಿಲ್ಲಾಧಿಕಾರಿಗಳು ಹಾಗೂ ವಿಭಾಗಾಧಿಕಾರಿಗಳು ಕಂದಾಯ ಆಯುಕ್ತರಿಗೆ ಬರೆದು ಕಳುಹಿಸಿದ್ದಾರೆ. ಅದು ಸಧ್ಯ ಸರ್ಕಾರದ ಪರಿಶೀಲನೆಯಲ್ಲಿದೆ. ರೈತರ ಪರಿಸ್ಥಿತಿ ಬಹಳ ಕಷ್ಟದ್ದಾಗಿದೆ. ಆದ್ದರಿಂದ ಇರತಕ್ಕ ಭೂ ಮಾಪನಾ ವಿಭಾಗವನ್ನು ಬೈಫರ್‌ಗೇಟ್ ಮಾಡಿಯಾದರೂ ಪರವಾಗಿಲ್ಲ, ಬಸವ ಕಲ್ಯಾಣ ತಾಲ್ಲೂಕು ಕೇಂದ್ರಕ್ಕೆ ಉಪ ವಿಭಾಗವನ್ನು ಮಾಡಿ ಜನರಿಗೆ ಅನುಕೂಲವನ್ನು ಮಾಡಿಕೊಡಿ.

ಶ್ರೀ ಕೆ. ಎಚ್. ಪಾಟೀಲ್.—ಈ ರೀತಿ ಕೇಳಿದರೆ ಆಡ್ಜಿಯಿಲ್ಲ. ಸರಿಯಾಗಿಯೇ ಉತ್ತರ ಕೊಡುತ್ತೇನೆ. ೧೯೪೪ನೇ ಇಸವಿ ಆಗಸ್ಟ್ ಹಿಂದಿನ ತಿಂಗಳ ಅವಧಿಯವರೆಗೆ ಬೀದರ್ ಜಿಲ್ಲೆಯಲ್ಲಿ ಒಂದು ರೆವಿನ್ಯೂ ವಿಭಾಗವಿತ್ತು. ಸರ್ಕಾರ ತಮ್ಮ ಆದೇಶದ ಪ್ರಕಾರ ದಿನಾಂಕ ೨೯-೮-೪೪ರಂದು ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಒಂದು ಹೊಸ ರೆವಿನ್ಯೂ ಉಪ ವಿಭಾಗವನ್ನು ರಚಿಸಿದೆ. ಬೀದರ್ ಜಿಲ್ಲೆಯಲ್ಲಿ ಈ ಕೆಳಗೆ ನಮೂದಿಸಿದಂತೆ ೨ ವಿಭಾಗಗಳಿದ್ದು, ಅವುಗಳ ವ್ಯಾಪ್ತಿ ಈ ಕೆಳಗನಂತಿದೆ. ಬೀದರ್ ಉಪ ವಿಭಾಗಕ್ಕೆ ಬೀದರ್ ತಾಲ್ಲೂಕು ಮತ್ತು ಭಾಲ್ಕಿ ತಾಲ್ಲೂಕು ಬಸವಕಲ್ಯಾಣ ಉಪ ವಿಭಾಗಕ್ಕೆ ಬಸವಕಲ್ಯಾಣ, ಹುಮ್ನಾಬಾದ್ ಹಾಗೂ ಭಾಲ್ಕಿ. ಭೂ-ಮಾಪನಾ ಇಲಾಖೆಯ ಪುನರ್‌ಘಟನೆಯ ಸಂದರ್ಭದಲ್ಲಿ ಸರ್ಕಾರದವರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರತಿ ಕಂದಾಯ ಉಪ ವಿಭಾಗಕ್ಕೂ ಒಂದೊಂದು ಭೂ-ಮಾಪನ ಕಾರ್ಯಾಲಯವನ್ನು ಸ್ಥಾಪನೆ ಮಾಡುವ ತೀರ್ಮಾನವನ್ನು ಈಗಾಗಲೇ ಕೈಗೊಂಡಿದೆ. ೧೯೬೮ನೇ ಇಸವಿ ಮಾರ್ಚಿ ಮಾಹೆಯಲ್ಲಿ ಆ ಸಮಯದಲ್ಲಿದ್ದಂತೆ ಎಲ್ಲಾ ೪೮ ಉಪ ವಿಭಾಗಗಳಲ್ಲಿ ಒಂದೊಂದು ಭೂ ಮಾಪನಾ ಕಾರ್ಯಾಲಯಗಳನ್ನು ತೆರೆಯಲಾಯಿತು. ಅದೇ ರೀತಿ ಮೇಲೆ ಹೇಳಿದ ಹಾಗೆ ದಿನಾಂಕ ೨೯-೮-೪೪ರ ಸರ್ಕಾರದ ಆದೇಶದಂತೆ ಬಸವಕಲ್ಯಾಣದಲ್ಲೂ ಹೊಸದಾಗಿ ರಚನೆ ಮಾಡಲಾದ ಕಂದಾಯ ಉಪ ವಿಭಾಗಕ್ಕೂ ಒಂದು ಭೂ ಮಾಪನ ಕಾರ್ಯಾಲಯದ ಮಂಜೂರಾತಿ ಅತ್ಯವಶ್ಯವನ್ನು ಮನಗಂಡು ಈ ವಿಷಯದಲ್ಲಿ ಜಿಲ್ಲೆಯಲ್ಲಿರುವ ನಿಯಮಗಳಿಗನುಸಾರವಾಗಿ ಪರಿಶೀಲಿಸುತ್ತಿದೆ.

ಉಪಾಧ್ಯಕ್ಷರು.—ಶ್ರೀಮಾನ್ ರೇವಣ್ಣನವರೆ. ತಮ್ಮ ಪ್ರಶ್ನೆ ನಂ. ೧೬೬೯ಕ್ಕೆ ಮಾನ್ಯ ಮಂತ್ರಿಗಳು ಸ್ವಲ್ಪ ಸಮಯ ಕೇಳಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳಲಾಗುವುದು. ಈಗ ಶ್ರೀ ಎಸ್. ಷಫಿ ಅಹಮದ್ ಅವರ ಪ್ರಶ್ನೆಯನ್ನು ಶ್ರೀ ಎ. ಕೆ. ಅನಂತ ಕೃಷ್ಣ ಅವರು ಕೇಳಬಹುದು.

ರಾಜ್ಯದ ಪದವೀಧರರುಗಳಿಗೆ ನೌಕರಿಯನ್ನು ಒದಗಿಸಲು ಕೈಗೊಂಡ ಕ್ರಮಗಳು

೫೧೧ (೧೬೫೫) ಶ್ರೀ ಎಸ್. ಷಫಿ ಅಹಮದ್ (ತುಮಕೂರು).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ: —

ಅ) ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಸದರಿ ಉದ್ಯೋಗ ವಿನಿಯಮ ಕೇಂದ್ರಗಳಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳಲ್ಲಿ ಎಂ.ಬಿ.ಬಿ.ಎಸ್. ಬಿ.ಇ. :ಎಲ್.ಎಲ್.ಬಿ. ಬಿ.ಎ. :ಬಿ.ಎಸ್ಸಿ. ಬಿ.ಕಾಂ.: ಪದವೀಧರರ ಸಂಖ್ಯೆ ? (ಪ್ರತ್ಯೇಕವಾದ ಪಟ್ಟಿ ಒದಗಿಸುವುದು).

ಇ) ಈ ಪದವೀಧರರಿಗೆ ಉದ್ಯೋಗ ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮ ?

ಶ್ರೀ ಕೆ. ಹೆಚ್. ಪಾಟೀಲ (ಕಾರ್ಮಿಕ ಸಚಿವರು).—

ಅ) ೧೯೯೦ನೇ ಏಪ್ರಿಲ್ ಮಾಹೆ ಅಂತ್ಯಕ್ಕೆ

ಪುರುಷರು	—೧೦,೧೫,೫೦೩
ಮಹಿಳೆಯರು	— ೨,೩೧,೨೨೪
	೧೨,೪೬,೭೨೭

(ಮಾಹಿತಿ ಲಗತ್ತಿಸಿದೆ)

ಆ)

ಎಂ.ಬಿ.ಬಿ.ಎಸ್.	—	೭೬೯
ಬಿ.ಇ.	—	೧೦೭೩೮
ಎಲ್.ಎಲ್.ಬಿ.	—	೩೩೮
ಬಿ.ಎ.	—	೩೫೧೯೦
ಬಿ.ಎಸ್ಸಿ.	—	೧೫೫೭೫
ಬಿ.ಕಾಂ.	—	೨೩೫೮೯

(ವಿವರ ಲಗತ್ತಿಸಿದೆ)

ಇ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದವರಿಗೆ ಉದ್ಯೋಗ ಒದಗಿಸಲು ಯಾವುದೇ ವಿಶಿಷ್ಟ ಕಾರ್ಯಕ್ರಮವು ಇರುವುದಿಲ್ಲ. ವಿವಿಧ ನೇಮಕಾತಿ ಮೂಲಗಳಿಂದ ಆಗಿಂದಾಗ್ಯೆ ಬರುವ ಬೇಡಿಕೆಗಳಿಗೆ ನೋಂದಾಯಿಸಿಕೊಂಡ ಅಭ್ಯರ್ಥಿಗಳ ಹೆಸರನ್ನು ಕಳುಹಿಸಿಕೊಡಲಾಗುತ್ತಿದೆ.

ANNEXURE-A

District wise break up of applicants on the rolls of the Employment Exchanges in the State at the end of April 1990.

Sl. No.	District	Number of applicants on Live Registsr		
		Men	Women	Total
1	2	3	4	5
1	Bangalore	325958	3286249	412207
2	Belguam	66597	9066	75663
3	Bellary	30021	4510	54531
4	Bidar	24562	2212	26774
5	Bijapur	44325	4835	49160
6	Chickmangalur	24551	8190	32731
7	Chitradurga	34804	7923	42727
8	Coorg	8921	4875	13796
9	Dharwar	72624	11557	84181
10	Gulburga	39305	4259	43564
11	Hassan	27183	3954	31137
12	Kolar	39785	6787	45572
13	Mandya	27007	5613	32680
14	Mysore	56965	14219	71184
15	North Kanara	29543	10391	39934
16	Raichur	29832	3415	33243
17	Shimoga	39656	10287	49943
18	South Kanara	43691	20494	64085
19	Tumkur	50273	12338	62616
	Grand Total:	1015503	231224	1246727

ANNEXURE-B

Statement showing educational break-up of applicants on the rolls of the Employment Exchanges in the State at the end of April 1990.

Sl. No.	Category	Number of applicants on Live-Register
1	2	3
I	Graduates:	
1.	Arts	35190
2.	Science	15575
3.	Commerce	23589
4.	Engineering	
	i) Civil	5334
	ii) Mechanical	2630
	iii) Electrical	955
	iv) Electronics	974
	v) Architecture	25
	vi) Metallurgy	0
	vii) Automobile	155
	viii) Aeronautics	4
	ix) Chemical	25
	x) Instrumentation	105
	xi) Textile	185
	xii) Industrial	285
5.	Medicine:	
	i) Allopathy	620
	ii) Ayurvedic	20
	iii) Homeopathy	00
	iv) Unani	1
	v) Dentist	4
6.	Horticulture	19
7.	Veterinary	19
8.	Law	38
9.	Education	17301
10.	Agriculture	738
11.	Fisheries	18
12.	Others	1263
	Graduates Total	105715

1	2	3
II	Post Graduates :	
1.	Arts	5175
2.	Science	2786
3.	Commerce	841
4.	Engineering	
	i) Civil	60
	ii) Mechanical	41
	iii) Electrical	7
	iv) Electronics	11
	v) Others	11
5.	Agriculture	37
6.	Medicine	85
7.	Veterinary	6
8.	Education	210
9.	Others	486
	Post Graduates Total :	9706
III)	Diploma Holders	26028
iv)	ITI/ATS/Other Certificate Holders	36699
v)	Metriculates	698628
vi)	Non-Matric	191543
vii)	Literates IIIiterates & Others.	178408
	Grand Total :	1246727

ಶ್ರೀ ಎ. ಕೆ. ಆನಂತಕೃಷ್ಣ.—ಮಾನ್ಯ ಉಪಾಧ್ಯಕ್ಷಣಿಯವರೇ, ಇಲ್ಲಿ ಕೊಟ್ಟಿರುವ ಉತ್ತರ ಈ ಪ್ರಶ್ನೆಗೆ ಸಮಂಜಸವಾಗಿಲ್ಲ. ಯಾರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿ ಕೊಂಡಿರುತ್ತಾರೆ ಅಂತಹ ನಿರುದ್ಯೋಗಿ ಪದವೀಧರರ ವಿಷಯದಲ್ಲಿ ಸರ್ಕಾರದ ನೀತಿ ಏನು ಎಂದು ಪ್ರಶ್ನೆ ಕೇಳಿದರೆ, ಆದಕ್ಕೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದವರಿಗೆ ಉದ್ಯೋಗ ಒದಗಿಸಲು ಯಾವುದೇ ವಿಶಿಷ್ಟ ಕಾರ್ಯಕ್ರಮವು ಇರುವುದಿಲ್ಲ ಎಂದು ಉತ್ತರ ಬಂದಿದೆ. ಉದ್ಯೋಗ ವಿನಿಮಯ ಕೇಂದ್ರದಲ್ಲಿ ರಿಜಿಸ್ಟರ್ ಮಾಡಿಸಿದವರಿಗೆ ಸರ್ಕಾರದಿಂದ ನೇರವಾಗಿ ಉದ್ಯೋಗ ಕೊಡುವ ಕೆಲಸ ಇರುವುದಿಲ್ಲವೆಂಬುದು ನಮಗೆ ಗೊತ್ತಿದೆ. ಇಪತ್ತು ರಾಜ್ಯದಲ್ಲಿ ತಮ್ಮ ಹೆಸರು ನೋಂದಾಯಿಸಿ ಕೊಂಡ ಎಂ.ಬಿ.ಬಿ.ಎಸ್. ಪದವೀಧರರು ೭೯೯ ಬಿ.ಇ. ಪದವೀಧರರು ೧೦,೭೩೮, ಎಲ್.ಎಲ್.ಬಿ. ಪದವಿ ಧರರು ೩೩೮, ಬಿ.ಎ. ಆದವರು ೩೫,೧೯೦, ಬಿ.ಎಸ್.ಸಿ. ಆದವರು ೧೫,೫೭೫ ಹಾಗೂ ಬಿ.ಕಾಂ ಆದವರು ೨೩,೫೯೯ ಮಂದಿ ಇದ್ದಾರೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ರಿಜಿಸ್ಟರ್ ಮಾಡಿಸಿದ್ದು ವಿನಿಮಯ ಕೇಂದ್ರದವರು ಯಾವ ಯಾವ ಜಾಗಕ್ಕೆ ಎಷ್ಟೆಷ್ಟು ಜನರ ಹೆಸರನ್ನು ರೆಫರ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಇವರ ಹೆಸರು ರೆಫರ್. ಆಗದೇ ಹೋದರೆ ಈ ಪದವೀಧರರ ಗತಿ ಏನು ? ನಿರುದ್ಯೋಗ ನಿವಾರಣೆ ಬಗ್ಗೆ ಸರ್ಕಾರದ ನೀತಿ ಏನು ಎಂಬ ಪ್ರಶ್ನೆ ಇದೆ. ಇದಕ್ಕೆ ಮಾನ್ಯ ಮಂತ್ರಿಗಳ ಉತ್ತರ ಬಯಸುತ್ತೇನೆ ?

ಶ್ರೀ ಕೆ. ಹೆಚ್. ಪಾಟೀಲ್.—ಇವತ್ತು ರಾಜ್ಯದಲ್ಲಿನ ನಿರುದ್ಯೋಗದ ಸಂಖ್ಯೆ ಇಷ್ಟೇ ಅಲ್ಲ. ಇದನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಶೇಕಡಾ ೩ರಷ್ಟು ಮಾತ್ರ ನಿರುದ್ಯೋಗದ ಸಂಖ್ಯೆ ಆಗುತ್ತದೆ. ಇವತ್ತು ನಿಜವಾದ ನಿರುದ್ಯೋಗದ ಸಂಖ್ಯೆ ಇನ್ನೂ ಹೆಚ್ಚು ಇದೆ. ಇವತ್ತು ಬೇರೆ ಬೇರೆ ಉದ್ದಿಮೆದಾರರು ನಮಗೆ ಇಂತಿಂತಹ ಪ್ರಿಪ್ಯಾರ್ಡ್‌ನೆಸ್‌ಯುಳ್ಳವರು ಬೇಕು ಎಂದಾಗ ಇವರ ಲಿಸ್ಟ್‌ನ್ನು ಅಲ್ಲಿಗೆ ಕಳುಹಿಸಿಕೊಡಲಾಗುತ್ತದೆ. ಆದರೆ ನೌಕರಿ ಕೊಡುವ ಕೆಲಸ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ದ್ದು ಅಲ್ಲ. ಆದರೂ ನಾವು ಈ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ನಿರುದ್ಯೋಗ ನಿವಾರಣೆ ದೃಷ್ಟಿಯಿಂದ ವಿನಿಮಯ ಕೇಂದ್ರಗಳಿಂದ ಡೈರೆಕ್ಟಾಗಿ ನೌಕರಿ ಒದಗಿಸುವುದಕ್ಕೆ ಸಹಾಯ ಮಾಡುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡುತ್ತಿದ್ದೇವೆ. ಇದಕ್ಕೆ ನಮ್ಮ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರಿಸ್ ಹೊಂದಾಣಿಕೆ ಆಗಬೇಕಾಗುತ್ತದೆ. ಅದನ್ನೆಲ್ಲಾ ನೋಡಿಕೊಂಡು ನಾವು ಮಾಡಬೇಕಾಗುತ್ತದೆ. ಮತ್ತೆ ಈ ಯುವಕರ ನಿರುದ್ಯೋಗ ಸಮಸ್ಯೆಯನ್ನು ಯಾವಾಗ ಬಗೆಹರಿಸುತ್ತೀರಿ ಎಂದು ಹೇಳಿದ್ದಾರೆ. ಇದನ್ನು ಪರಿಹರಿಸಬೇಕಾದರೆ, ಬರೀ ನೌಕರಿ ಒಂದರಿಂದಲೇ ಮಾಡುವುದಕ್ಕಾಗುವುದಿಲ್ಲ. ಇವತ್ತು ಎಷ್ಟು ನೌಕರಿ ಹುದ್ದೆಗಳು ತಯಾರು ಆಗುತ್ತವೆಯೋ ಅದಕ್ಕೆ ನಾಲ್ಕು ಪಟ್ಟು ಮಂಕ್ಕಳನ್ನು ಹಡೆಯುವ ಶಕ್ತಿಯನ್ನು ನಮ್ಮ ದೇಶ ಪಡೆದುಕೊಂಡಿದೆ. ಇವತ್ತು ಯಾವುದಾದರೂ ಉದ್ಯಮವನ್ನು ಪ್ರಾರಂಭ ಮಾಡಿ ಆ ಉದ್ಯಮದ ಮುಖಾಂತರ ನಿರುದ್ಯೋಗವನ್ನು ಹೋಗಲಾಡಿಸಬೇಕೇ ವಿನಃ ಉಳಿದ ಮಾರ್ಗದಿಂದ ಹೋಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎ. ಕೆ. ಆನಂತಕೃಷ್ಣ.—ಇವತ್ತು ಉದ್ಯೋಗ ವಿನಿಮಯ ಕೇಂದ್ರದಿಂದ ಏನು ಉದ್ದಿಮೆಗಳಿಗೆ ಹೆಸರನ್ನು ಕಳುಹಿಸುತ್ತೀರಿ. ಅಂತಹವರಿಗೆ ಸೂಕ್ತ ಕೆಲಸ ಸಿಕ್ಕಿದೆಯೋ ಅಥವಾ ಸಿಗಲಿಲ್ಲವೇ, ಎನ್ನುವ ಬಗ್ಗೆ ಉಸ್ತುವಾರಿ ಇದೆಯೇ ? ಒಂದು ವೇಳೆ ಕೆಲಸ ಕೊಟ್ಟಿಲ್ಲವೆಂದರೆ ಯಾವ ಕಾರಣದಿಂದ ಕೈಬಿಡಲಾಗಿದೆ ಎಂದು ಕೇಳಬೇಕಾಗುತ್ತದೆ. ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ?

ಶ್ರೀ ಕೆ. ಹೆಚ್ ಪಾಟೀಲ್.—ಈಗ ನಾವು ಅದನ್ನು ಮಾಡುವುದಕ್ಕೆ ಹೆಚ್ಚಿದ್ದೇವೆ. ಯಾರಿಗೆ ಉದ್ಯೋಗ ಕೊಟ್ಟಿದ್ದಾರೆ ಅಥವಾ ಕೊಟ್ಟಿಲ್ಲ ಎನ್ನುವ ಬಗ್ಗೆ ಸ್ಟೇಟ್‌ಮೆಂಟ್ ಕಳುಹಿಸಬೇಕೆಂದು ನಿಯಮ ಇದೆ. ಅನೇಕ ಸಂದರ್ಭದಲ್ಲಿ ಉದ್ದಿಮೆದಾರರು ಅದನ್ನು ಕಳುಹಿಸುತ್ತಾರೆ. ಅದನ್ನೆ ಕೆಲವರು ಕಳುಹಿಸುವುದಿಲ್ಲ. ಈ ಬಗ್ಗೆ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸರ್ ಮೂಲಕ ನಿರ್ದಿಷ್ಟವಾದ ಆದೇಶವನ್ನು ಕೊಡಿಸುತ್ತೇನೆ. ಯಾರು ಯಾರಿಗೆ ಅಪಾಯಿಂಟ್ ಮಾಡಿದ್ದಾರೆ, ಯಾರಿಗೆ ಮಾಡಿಲ್ಲ, ಮಾಡಿದ್ದಿನ್ನರೆ, ಅದಕ್ಕೆ ಕಾರಣ ಏನು, ಎಂದು ನೋಡಿಕೊಂಡು ಪರಿಶೀಲನೆ ಮಾಡಬೇಕೆಂದು ನಾನು ಆದೇಶ ಕೊಡುತ್ತೇನೆ.

ಶ್ರೀ ಎ. ಕೆ. ಆನಂತಕೃಷ್ಣ.—ಮಾನ್ಯ ಉಪಾಧ್ಯಕ್ಷರೇ ಯವರೆ, ನನ್ನ ಸ್ವಂತ ಅನುಭವದಲ್ಲಿ ಹೇಳುವುದಾದರೆ, ಸಾರ್ವಜನಿಕ ಉದ್ದಿಮೆಗಳಿಗೆ ಅಲ್ಪಸಂಖ್ಯಾತರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಪಟ್ಟಿಯನ್ನು ಉದ್ಯೋಗ ವಿನಿಮಯ ಅಧಿಕಾರಿಯವರು ಏನು ಕಳುಹಿಸಿ ಕೊಡುತ್ತಾರೆ, ಆ ಅಭ್ಯರ್ಥಿಗಳಿಗೆ ಉಪಯುಕ್ತವಾದ ಮತ್ತು ಅನುಕೂಲವಾದ ಅವಶ್ಯವಿರುವ ತರಬೇತಾದ ಅಭ್ಯರ್ಥಿಗಳು ಇದರಲ್ಲಿ ಇಲ್ಲವೆಂದು ವಾಪಸ್ಸು ಕಳುಹಿಸುತ್ತಾರೆ. ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಗಳ ಅಭ್ಯರ್ಥಿಗಳನ್ನು ಈ ತರಹ ಕಾರಣಗಳನ್ನು ಹೇಳಿ ಕೊಂಡು ಕೈಬಿಡುತ್ತಾರೆ. ಈ ವಿಚಾರ ಮಾನ್ಯಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳುವುದು ನಿಜ. ಆ ವಿಚಾರ ನನ್ನ ಗಮನಕ್ಕೂ ಬಂದಿದೆ. ಆ ಬಗ್ಗೆ ನಾನು ವಿಚಾರಣೆ ಮಾಡುತ್ತೇನೆ.

ಕಪಿಲಾ ನದಿಯ ಸ್ನಾನ ಘಟ್ಟವನ್ನು ಶುದ್ಧಗೊಳಿಸುವುದು

೫೧೨ (೧೫೫೮) ಶ್ರೀ ಎಂ. ಮಹದೇವ (ನಂಜನಗೂಡು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಆ) ಕಪಿಲಾ ನದಿಯ ದಡವಲ್ಲಿರುವ ಸ್ನಾನ ಘಟ್ಟದಲ್ಲಿ ಸಾವಿರಾರು ಭಕ್ತಾದಿಗಳು ಸ್ನಾನ ಮಾಡುವ ಸ್ಥಳದಲ್ಲಿ ಜೊಂಡು ಬೆಳೆದು ಅಶುದ್ಧವಾದ ಹಾಗೂ ದುರ್ವಾಸನೆಯಿಂದ ಕೂಡಿದ ನಿಂತ ನೀರಿನಲ್ಲಿ ಸ್ನಾನ ಮಾಡಿ ಆರೋಗ್ಯಕ್ಕೆ ಧಕ್ಕೆಯಾಗಿರುವುದರ ಜೊತೆಗೆ ಪ್ರಾಣ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?